ಆಯುಕ್ತರು
ಕಾರ್ಮಿಕ ಆಯುಕ್ತರವರ ಕಛೇರಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

"ಕಾರ್ಮಿಕ ಭವನ", ಐಟಿಐ ಕಾಲೇಜ್ ಕಾಂಪೌಂಡ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560029
ಕಛೇರಿ: 080-29753078
ಇಮೇಲ್: labour.commissioner42@gmail.com

ಸಂಖ್ಯೆ: ಕವೇಕಾ-2/ಇತರೆ/ಪ್ರಚಾರ/2017-18 ದಿನಾಂಕ: 27-11-2020

## : ಕಛೇರಿ ಆದೇಶ :

ವಿಷಯ: **"ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಉದ್ಯೋಗ (Employment in Micro, Small and Medium Enterprises)"** ಉದ್ದಿಮೆಯನ್ನು ಕನಿಷ್ಠ ವೇತನ ಕಾಯ್ದೆ 1948 ರ ಅನುಸೂಚಿಗೆ ದಿನಾಂಕ: 17-11-2020 ರಂದು ಸೇರ್ಪಡೆಗೊಳಿಸಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 34 ಎಲ್‌ಡಬ್ಲ್ಯೂಎ 2020 ದಿನಾಂಕ: 17-11-2020.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **"ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಉದ್ಯೋಗ (Employment in Micro, Small and Medium Enterprises)"** ಉದ್ದಿಮೆಯನ್ನು ಕನಿಷ್ಠ ವೇತನ ಕಾಯ್ದೆ 1948 ರ ಅನುಸೂಚಿಗೆ ದಿನಾಂಕ: 17-11-2020 ರಂದು ಸೇರ್ಪಡೆಗೊಳಿಸಿ ಸರ್ಕಾರವು ಉಲ್ಲೇಖದನ್ವಯ ಹೊರಡಿಸಿರುವ ಅಧಿಸೂಚನೆಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿರುತ್ತದೆ. ಈ ಅಧಿಸೂಚನೆಯ ಕುರಿತು ಕೆಳಗೆ ಸೂಚಿಸಿದಂತೆ ಸಾರ್ವಜನಿಕರ ಗಮನಕ್ಕೆ ತರಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದೆ.

1. ಅಧಿಸೂಚನೆಯನ್ನು ತಹಸೀಲ್ದಾರರು, ಉಪವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳ ಕಛೇರಿಗಳು ಹಾಗೂ ಇತರೆ ಸರ್ಕಾರಿ ಕಛೇರಿಗಳಲ್ಲಿ ಪ್ರದರ್ಶಿಸುವ ಮೂಲಕ ಸಾರ್ವಜನಿಕರ ಗಮನಕ್ಕೆ ತರಲು ಕ್ರಮ ಕೈಗೊಳ್ಳುವುದು.
2. ಅಧಿಸೂಚನೆಯನ್ನು ನಿಮ್ಮ ಹಾಗೂ ನಿಮ್ಮ ಅಧೀನದ ಎಲ್ಲಾ ಕಛೇರಿಗಳ ಸೂಚನಾಫಲಕಗಳಲ್ಲಿ ಪ್ರದರ್ಶಿಸುವುದು.

1/12/20

S. L. (signature)
ಕಾರ್ಮಿಕ ಆಯುಕ್ತರ ಪರವಾಗಿ
ಜಂಟಿ ಕಾರ್ಮಿಕ ಆಯುಕ್ತರು
(ಕನಿಷ್ಠ ವೇತನ)

**ಇವರಿಗೆ:**

1. ಎಲ್ಲಾ ಕಾರ್ಮಿಕ ಅಧಿಕಾರಿಗಳು- ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಹಿರಿಯ ಕಾರ್ಮಿಕ ನಿರೀಕ್ಷಕರು ಹಾಗೂ ಕಾರ್ಮಿಕ ನಿರೀಕ್ಷಕರುಗಳಿಗೆ ಪ್ರತಿಗಳನ್ನು ತಲುಪಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸುವುದು.
2. ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರು.
3. ಎಲ್ಲಾ ಉಪ ಕಾರ್ಮಿಕ ಆಯುಕ್ತರು- ಮೇಲ್ವಿಚಾರಣಾ ಕ್ರಮ ವಹಿಸುವುದು.
4. ಉಪ ಕಾರ್ಮಿಕ ಆಯುಕ್ತರು (ಪ್ರಚಾರ ಮತ್ತು ಅಂಕಿ ಅಂಶ), ಬೆಂಗಳೂರು - ಇಲಾಖೆಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲು ಕ್ರಮವಹಿಸುವುದು.
5. ಜಂಟಿ ಕಾರ್ಮಿಕ ಆಯುಕ್ತರು (ಕನಿಷ್ಠ ವೇತನ), ಬೆಂಗಳೂರು
6. ಅಪರ ಕಾರ್ಮಿಕ ಆಯುಕ್ತರು (ಆಡಳಿತ), ಬೆಂಗಳೂರು
7. ಅಪರ ಕಾರ್ಮಿಕ ಆಯುಕ್ತರು (ಕೈಗಾರಿಕಾ ಬಾಂಧವ್ಯ), ಬೆಂಗಳೂರು

} ಮಾಹಿತಿಗಾಗಿ (5-7)

# ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 34 ಎಲ್‌ಡಬ್ಲ್ಯೂಎ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 17-11-2020

## ಅಧಿಸೂಚನೆ

1948ರ ಕನಿಷ್ಠ ವೇತನ ಕಾಯ್ದೆ (1948ರ ಕೇಂದ್ರಾಧಿನಿಯಮ 11)ರ ಅನುಸೂಚಿಗೆ "ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಉದ್ಯೋಗ" (Employment in Micro, Small and Medium Enterprises) ಈ ಉದ್ದಿಮೆಯಲ್ಲಿ ತೊಡಗಿರುವ ಕಾರ್ಮಿಕರಿಗೆ ಕನಿಷ್ಠ ವೇತನ ನಿಗಧಿಪಡಿಸಬೇಕೆಂದು ಭಾವಿಸಿರುವುದರಿಂದ, ಸದರಿ ಉದ್ದಿಮೆಯನ್ನು ಕನಿಷ್ಠ ವೇತನ ಕಾಯ್ದೆಯ ಅನುಬಂಧದ ಭಾಗ-1ಕ್ಕೆ ಸೇರ್ಪಡೆ ಮಾಡುವ ಬಗ್ಗೆ ಕರಡು ಪ್ರಸ್ತಾವನೆ ದಿನಾಂಕ: 04-04-2020ನ್ನು, ದಿನಾಂಕ: 16-07-2020ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಇದರಿಂದ ಭಾದಿತರಾಗುವ ಹಾಗೂ ಸಂಬಂಧವಿರುವ ವ್ಯಕ್ತಿಗಳಿಂದ ಸಲಹೆ/ ಆಕ್ಷೇಪಣೆಗಳನ್ನು ಸ್ವೀಕರಿಸಲು ಮೂರು ತಿಂಗಳ ಕಾಲಾವಧಿಯನ್ನು ನೀಡಲಾಗಿತ್ತು. ಸದರಿ ಅವಧಿಯಲ್ಲಿ ಈ ಬಗ್ಗೆ ಯಾವುದೇ ಸಲಹೆ/ ಆಕ್ಷೇಪಣೆಗಳು ಸ್ವೀಕೃತಗೊಂಡಿರುವುದಿಲ್ಲ.

ಆದ್ದರಿಂದ, ಕನಿಷ್ಠ ವೇತನ ಕಾಯ್ದೆ 1948ರ (1948ರ ಕೇಂದ್ರಾಧಿನಿಯಮ 11)ರ ಸೆಕ್ಷನ್ 27 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, "ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಉದ್ಯೋಗ" (Employment in Micro, Small and Medium Enterprises) ಉದ್ದಿಮೆಯನ್ನು ಕನಿಷ್ಠ ವೇತನ ಕಾಯ್ದೆಯ ಅನುಬಂಧ ಭಾಗ-1ಕ್ಕೆ ಸೇರಿಸಲಾಗಿದೆ.

ಟಿಪ್ಪಣಿ:

(iv) a micro enterprise, where the investment in plant and machinery does not exceed twenty-five lakh rupees.

(v) a small enterprise, where the investment in plant and machinery is more than twenty-five lakh rupees but does not exceed five crore rupees; or

(vi) a medium enterprise, where the investment in plant and machinery is more than five crore rupees but does not exceed ten crore rupees;

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

A. Umadevi 17/11/2020
(ಎ. ಉಮಾದೇವಿ)
ಪೀಠಾಧಿಕಾರಿ-2
ಕಾರ್ಮಿಕ ಇಲಾಖೆ.

ಪ್ರತಿಗಳು:-

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ. (ಕಾರ್ಮಿಕ ಆಯುಕ್ತರ ಮೂಲಕ)